ಸೊರಬ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರಿ ಮಾರಾಟ ಸಂಘದ ಪರಿಸ್ಥಿತಿ ಬಗ್ಗೆ.

೭೭೧. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ, ದಯವಿಟ್ಟು ಉತ್ತರಿಸುವರೆ ?

ಅ) ಸೊರಬ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರಿ ಮಾರಾಟ ಸಂಘವು ಯಾವ ಸ್ಥಿತಿಯಲ್ಲಿದೆ.

ಆ) ಸದರಿ ಸಂಘದ ಅಧೀನದಲ್ಲಿರುವ ಲಕ್ಷಾಂತರ ರೂ. ಗಳ ಬೆಲೆ ಬಾಳುವ ಅಕ್ಕಿ ಗಿರಣಿ ಉಗ್ರಾಣ ಲಾರಿ ಇತ್ಯಾದಿ ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈಗ ಹಾಲಿ ಅದೇ ತಾಲ್ಲೂಕಿನಲ್ಲಿ ಉತ್ಪಾದಕವಾಗಿ ಕೆಲಸ ಮಾಡುತ್ತಿರುವ ಸೇವಾ ಸಹಕಾರ ಸಂಘ ಇದನ್ನು ಗಮನಿಸಿ ಆಧಾರದ ಮೇಲೆ ನೀಡಿ ಈ ಸಂಘದ ಸ್ಥಿತಿಯನ್ನು ಸುಧಾರಿಸಲು ಸರ್ಕಾರದವರು ಉದ್ದೇಶಿಸುವರೇ ?

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಮಂತ್ರಿಗಳು).—

ಅ) ನಷ್ಟದಲ್ಲಿ ನಡೆಯುತ್ತಿದೆ.

ಆ) ಇಲ್ಲ.

ಇ) ಇಲ್ಲ.

(ಮಾನ್ಯ ಯಡಿಯೂರಪ್ಪನವರ ಪರವಾಗಿ ಆನಂದರಾವ್).—

ಶ್ರೀ ಎಂ. ಆನಂದರಾವ್.—೧೯೭೫—೭೬ರಲ್ಲಿ ಟಿಎಪಿಸಿಎಂಎಸ್. ನವರಿಗೆ ಕೆಪಸ್‌ಎಫ್‌ಸಿ. ನವರು ಏಜೆನ್ಸಿ ಕೊಟ್ಟರು. ಅವರು ಸಬ್ ಏಜೆನ್ಸಿಗಳನ್ನು ತೆಗೆದುಕೊಂಡರು. ಇವರಿಂದ ಸಾವಿರಾರು ಚೀಲ ಭತ್ತ ಬರಬೇಕಾಗಿದೆ. ಇವರಿಂದ ವಸೂಲಿ ಮಾಡುವ ಬಗ್ಗೆ ಏಕೆ ಕ್ರಮ ತೆಗೆದುಕೊಂಡಿಲ್ಲ. ಈ ಏಜೆನ್ಸಿಯಿಂದ ಟಿಎಪಿಸಿಎಂಎಸ್ ನವರು ಬಾಂಡ್ ಪಡೆದಿದ್ದಾರೆಯೇ ? ಮಾರ್ಕೆಟಿಂಗ್ ಫೆಡರೇಷನ್‌ನಿಂದ ಗೊಬ್ಬರಕ್ಕೆ ಕೊಟ್ಟ ಹಣ ಒಂದು ಲಕ್ಷ ರೂಪಾಯಿಗಳು ಪಾವತಿ ಆಗಿಲ್ಲ. ಈ ವಿಷಯದ ಬಗ್ಗೆ ಸರ್ಕಾರದ ಕ್ರಮವೇನು ಎಂಬುದನ್ನು ತಿಳಿಸಬೇಕು ?

ಶ್ರೀ ಆರ್. ಎಲ್. ಜಾಲಪ್ಪ —ಷೇರು ಮತ್ತು ಇತರ ರೂಪದಲ್ಲಿ ಈ ಒಂದು ಸಂಸ್ಥೆಗೆ ನಾಲ್ಕು ಲಕ್ಷ ನಲವತ್ತೈದು ಸಾವಿರ ರೂಪಾಯಿಗಳ ಸಾಲ ಕೊಟ್ಟಿದ್ದೇವೆ. ಆದನ್ನು ಸಂಪೂರ್ಣವಾಗಿ ಅವರು ತೀರಿಸಿದ್ದಾರೆ. ನಮ್ಮ ಮಾನ್ಯ ಸದಸ್ಯರು ಹೇಳಿದಹಾಗೆ, ೮೫ ಸಾವಿರ ರೂಪಾಯಿಗಳನ್ನು ಮಾರ್ಕೆಟಿಂಗ್ ಫೆಡರೇಷನ್‌ನವರು ಸಾಲವಾಗಿ ಕೊಟ್ಟಿದ್ದಾರೆ. ೧ ಲಕ್ಷ ೫೦ ಸಾವಿರ ಡಿ. ಸಿ. ಸಿ. ಬ್ಯಾಂಕಿಗೆ ಕ್ಯಾಷ್ ಕ್ರೆಡಿಟ್ ಮೇಲೆ ಸಾಲ ಮಾಡಿ, ಡಿಫಾಲ್ಟ್ ಆಗಿದ್ದಾರೆ. ಅಲ್ಲಿ ೧.೯೩ ಲಕ್ಷ ರೂಪಾಯಿ ಲುಕ್ಸಾನು ಆಗಿದೆ. ೧೧ ಲಕ್ಷ ೮೦ ಸಾವಿರ ರೂಪಾಯಿಗಳ ಅಸೆಟ್ಸ್ ಇದೆ. ಅವರು ಮತ್ತೆ ಪಿ.ಡಿ. ಅಕೌಂಟಿನಿಂದ ಹಣಕೊಡಿ ಎಂದು ಕೇಳಿದ್ದಾರೆ. ಸಂಸ್ಥೆ ಇದೇ ಕಾರಣಕ್ಕೋಸ್ಕರ ಸೂಪರ್‌ಸೀಡ್ ಆಗಿದೆ. ದಿನಾಂಕ ೧೦-೯ ೮೩ರಂದು ಹೊಸ ಆಡಳಿತ ಮಂಡಲಿಯನ್ನು ನೇಮಕ ಮಾಡಲಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅಲ್ಲಿ ಭತ್ತದಲ್ಲಿ ದುರುಪಯೋಗವಾಗಿರುವುದು ಕಂಡುಬಂದಿದೆ. ಸಂಸ್ಥೆಗೆ ಸ್ವಲ್ಪ ಲುಕ್ಸಾನು ಆಗಿದೆ. ಹೊಸ ಆಡಳಿತ ಮಂಡಲಿಯವರು ಸರಿಯಾದ ರೀತಿಯಲ್ಲಿ ನಡೆದುಕೊಂಡು ಹೋಗಬೇಕೆಂದು ಸೂಚನೆ ಕೊಡಲಾಗಿದೆ. ಅಲ್ಲದೆ ಈಗಾಗಲೇ ಆಗಿರುವ ದುರುಪಯೋಗದ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆ.

ರಾಯಚೂರು ನಗರಕ್ಕೆ ನೀರು ಸರಬರಾಜು

೭೭೭. ಶ್ರೀ ಸಂಗಮೇಶ್ವರ ಸರದಾರ್ (ರಾಯಚೂರು).—ಮಾನ್ಯ ನಗರಾಭಿವೃದ್ಧಿ ಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ ?